

ಕೇಳಿಸಿಕೊಂಡಿರುವ ಹೆಣ್ಣುಮಕ್ಕಳ ಉದಾಹರಣೆಗಳು ತೀರಾ ಕಡಿಮೆ. ಬದಲಿಗೆ, 'ಬಿಟ್ಟುಬಂದರೆ, ನಾನು ಮನೆಗೆ ಸೇರಿಸಿಕೊಳ್ಳುವುದಿಲ್ಲ' ಎಂದೋ, 'ನೀನು ಗಂಡನ್ನು ಬಿಟ್ಟರೆ, ನಿನ್ನ ತಂಗಿಗೆ ಮದುವೆಯಾಗುವುದಿಲ್ಲ' ಎಂದೋ, ಇನ್ನೂ ಮುಂದುವರೆದು, 'ನೀನು ಗಂಡನನ್ನು ಬಿಟ್ಟೆಯೆಂದರೆ, ಅವಮಾನದಿಂದ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕಷ್ಟೇ' ಎಂಬ ಮಾತನ್ನೇ ಪೋಷಕರೂ ಹೇಳಿರುತ್ತಾರೆ.

ಆದರೆ, ಬಿಟ್ಟುಬಂದ ಮೇಲೆ, ಯಾವುದೋ ಸೇಡಿಗೆ, ಅಥವಾ ಹಣದ ದುರಾಸೆಯಿಂದ, ದೂರಾದ ಆ ಗಂಡನನ್ನು, ಅವನ ಮನೆಯವರನ್ನೂ ಹಣಕ್ಕಾಗಿ ಪೀಡಿಸುವ ಮಹಿಳೆಯರು, ಅವರ ಪೋಷಕರನ್ನೂ ಕಾಣಬಹುದು. ಇವೆಲ್ಲ ಸಮಾಜದ ತಪ್ಪು ಪ್ರಜ್ಞೆಯ, ಹೇರಿಕೆಗಳ ಪ್ರತಿಫಲಗಳು.



## ಕಾನೂನಿನಲ್ಲೂ ಸಿಗದ ಪರಿಹಾರ

ಮಹಿಳೆಯರ ಮೇಲಾಗುವ ಈ ಕೌಟುಂಬಿಕ ಹಿಂಸೆಯನ್ನು ತಡೆಯುವುದು ದೂರದ ಮಾತು. ನಡೆದಂತಹ ಹಿಂಸಾಚಾರಗಳಿಗೆ ತಕ್ಷಣ ಸ್ಪಂದಿಸುವುದು, ರಕ್ಷಣೆ ನೀಡುವುದು ಹೇಗೆ ಎನ್ನುವುದನ್ನು ನಾವಿನ್ನೂ ಕಂಡುಕೊಂಡಿಲ್ಲ. ಇಷ್ಟೆಲ್ಲ ಹಿಂಸಾಚಾರಗಳು ನಡೆಯುವಾಗಲೂ ಯಾವ ಹೆಣ್ಣುಮಗಳೂ ಧೈರ್ಯವಾಗಿ ಪೊಲೀಸ್ ಸ್ಟೇಶನ್‌ಗೆ ನೇರ ಹೋಗಿ ದೂರು ದಾಖಲಿಸಬಹುದಾದ ಪರಿಸ್ಥಿತಿಯನ್ನು ನಾವಿನ್ನೂ ಸೃಷ್ಟಿಸಿಕೊಂಡಿಲ್ಲ. ಎಲ್ಲೋ ದಾಖಲಾಗುವ ಕೆಲವು ಸುಳ್ಳು ದೂರುಗಳ ನಿಯಂತ್ರಣದ ಬಗ್ಗೆ ನಮಗೆ ಕಳಕಳಿಯಿರುತ್ತದೆಯೇ ಹೊರತು, ಹೆಣ್ಣುಮಗಳ ಆತ್ಮಗೌರವ, ಸುಖ, ಹೋಗಲಿ, ಕನಿಷ್ಠ ಜೀವವನ್ನು ಉಳಿಸುವ ಬಗ್ಗೆಯೂ ಯಾವ ಆಸ್ಥೆ, ಆಸಕ್ತಿಯೂ ಇರುವುದಿಲ್ಲ.

ಹಲವು ಉಚ್ಚ ನ್ಯಾಯಾಲಯಗಳು, ವರದಕ್ಷಿಣೆಗೆ ಸಂಬಂಧಿಸಿದ ದೂರುಗಳನ್ನು ದಾಖಲಿಸುವ ಮೊದಲು ಪೊಲೀಸ್ ಸ್ಟೇಶನ್‌ಗಳಲ್ಲಿ ಅವರು ಪಾಲಿಸಬೇಕಾದ ನಿಯಮಗಳ ಬಗ್ಗೆ ನಿರ್ದೇಶನಗಳನ್ನು ನೀಡುತ್ತವೆಯೇ ಹೊರತು, ಮಹಿಳೆಯರ ಮೇಲಾಗುತ್ತಿರುವ ಕೌಟುಂಬಿಕ ದೌರ್ಜನ್ಯದಿಂದ ಅವರನ್ನು ರಕ್ಷಿಸಬಹುದಾದ ನಿಟ್ಟಿನಲ್ಲಿ ಯಾವೊಂದು ಕ್ರಮವನ್ನೂ ರೂಪಿಸಿಲ್ಲ.

'ಐಪಿಸಿ'ಯ ಸೆ.498ಎ, ಮಹಿಳೆಯರ ಮೇಲೆ, ಗಂಡಂದಿರು ಹಾಗೂ ಅವನ ಮನೆಯವರು ಮಾಡುವ ದೌರ್ಜನ್ಯ ಒಂದು ಅಪರಾಧವೆನ್ನುತ್ತದೆ. ಕಾನೂನು ಆಯೋಗದ ಕೆಲವು ವರದಿಗಳು, ಈ ಅಪರಾಧದ ಕಾನೂನನ್ನು ರಾಜಿಮಾಡಿಕೊಳ್ಳಬಲ್ಲ ಅಪರಾಧವಾಗಿ ವರ್ಗೀಕರಿಸಬೇಕೆಂದು ಶಿಫಾರಸು ಮಾಡಿವೆ. ಸಾಮಾನ್ಯವಾಗಿ, ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿ, ಗಂಭೀರವಲ್ಲದ ಅಪರಾಧಗಳಲ್ಲಿ ಮಾತ್ರ ರಾಜಿಮಾಡಿಕೊಳ್ಳುವ ಅವಕಾಶ ಇರುತ್ತದೆ. ಅಂದರೆ, ಕೌಟುಂಬಿಕ ದೌರ್ಜನ್ಯವೆಂಬುದು, ಗಂಭೀರವಲ್ಲದ ಅಪರಾಧ ಎಂದ ಹಾಗಾಯಿತು. 'ಸಂಸಾರದಲ್ಲಿ ಹೊಂದಿಕೊಂಡು ಹೋಗುವಲ್ಲಿ



